ಸಂಖ್ಯೆ:ಉನಸಸ:ಬಿ1:ಸಿಆರ್:ಟಿ.ಸಂ:12:2009-10 ನಗರಸಭಾ ಕಾರ್ಯಾಲಯ,

ಉಡುಪಿ, ದಿನಾಂಕ: 11.02.2010

# ಉಡುಪಿ ನಗರಸಭೆ

## ಟೆಂಡರು ಪ್ರಕಟಣೆ

ಉಡುಪಿ ನಗರಸಭಾ ವ್ಯಾಪ್ತಿಯ ಈ ಕೆಳಗೆ ಸೂಚಿಸಿದ ಕಾಮಗಾರಿಗಳಿಗೆ ನಿಗಧಿತ ನಮೂನೆಯಲ್ಲಿ ಪ್ರತ್ಯೇಕ ಮೊಹರಾದ ಐಟಂವಾರು ಟೆಂಡರುಗಳನ್ನು ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದೆ. ಪೌರಾಯುಕ್ತರು ಅಥವಾ ಅವರಿಂದ ಅಧಿಕಾರ ಹೊಂದಿದವರು ದಿನಾಂಕ:12.03.2010 ರಂದು 4.00 ಗಂಟೆಯವರೆಗೆ ಟೆಂಡರುಗಳನ್ನು ಸ್ವೀಕರಿಸಲಿರುವರು. ನಿಗಧಿಪಡಿಸಿದ ಬೆಲೆಯನ್ನು ನಗರಸಭಾ ಖಜಾನೆಗೆ ಪಾವತಿ ಮಾಡಿ ಟೆಂಡರು ನಮೂನೆಯನ್ನು ಪಡೆದುಕೊಳ್ಳುವರೇ ಗುತ್ತಿಗೆದಾರಾಗಿ ನೊಂದಾಯಿಸಿದ ಪ್ರತಿಯೊಂದಿಗೆ ದಿನಾಂಕ:11.03.2010 ರ ವರೆಗೆ ಅರ್ಜಿಯನ್ನು ಸಲ್ಲಿಸಿ ಟೆಂಡರು ನಮೂನೆಯನ್ನು ಪಡೆದುಕೊಳ್ಳಬಹುದು. ಬಂದಿರುವ ಟೆಂಡರುಗಳನ್ನು ದಿನಾಂಕ:12.03.2010 ರಂದು ಸಂಜೆ 4.30 ಗಂಟೆಗೆ ಸರಿಯಾಗಿ ಅಥವಾ ಸೂಕ್ತ ದಿನದಂದು ಹಾಜರಿರುವ ಟೆಂಡರುದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ www.udupicity.gov.in ನಿಂದ ಪಡೆದುಕೊಳ್ಳಬಹುದು.

| ಕ್ರ. ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ | ಟೆಂಡರ್ ಮೊತ್ತ | ಭದ್ರತಾ ಠೇವಣಿ | ಟೆಂಡರ್ ನಮೂನೆ ಬೆಲೆ |
|---|---|---|---|---|---|
| 1 | ಉಡುಪಿ ನಗರಸಭಾ ವ್ಯಾಪ್ತಿಯ ಸಗ್ರಿ ವಾಸುಕಿ ನಗರ ಸುಬ್ರಹ್ಮಣ್ಯ ದೇವಸ್ಥಾನ ರಸ್ತೆ ಬದಿ ಕುಸಿದ ತಡೆಗೋಡೆ ಪುನರ್ ರಚನೆ. | 110000.00 | 109881.00 | 2747.00 | 750.00 |
| 2 | ಮಣಿಪಾಲ ವಾರ್ಡಿನ ಮಣಿಪಾಲ ಬಸ್ಸು ತಂಗುದಾಣ ಹಾಗೂ ಮಣಿಪಾಲ ಎನ್.ಜಿ.ಓ ಕಾಲನಿ ರಸ್ತೆ ಪ್ಯಾಚ್ ದುರಸ್ಥಿ. | 150000.00 | 147836.00 | 3696.00 | 250.00 |
| 3 | ಮಲ್ಪೆ ಮೊಳ ಕಾಲ್ಮುರು ರಸ್ತೆಯ ರಾಜ್ಯ ಹೆದ್ದಾರಿ ಕಡಿಯಾಳಿಯಿಂದ ಎಂ.ಜಿ.ಎಂ. ತನಕ ರಸ್ತೆಯ ಎಡಭಾಗದಲ್ಲಿ ಒಳಚರಂಡಿ ಗ್ರಾಮಸಾರ ಕೊಳವೆ ಮಾರ್ಗ ಅಳವಡಿಸುವುದು. | 1000000.00 | 993310.00 | 24833.00 | 1500.00 |
| 4 | ಮರು ಟೆಂಡರ್ (ಎಸ್.ಎಫ್.ಸಿ 2009-10 ಮುಕ್ತನಿಧಿ)<br>ಗೋಪಾಲಪುರ ವಾರ್ಡಿನ 4ನೇ ಮುಖ್ಯ ರಸ್ತೆಯಲ್ಲಿ 3ನೇ, 4ನೇ ಅಡ್ಡ ರಸ್ತೆ ಮತ್ತು ಮುಖ್ಯ ರಸ್ತೆ ಡಾಮಾರೀಕರಣ (ಫೇವರ್ ಫಿನಿಶ್) | 700000.00 | 684461.00 | 17200.00 | 1000.00 |

## ಷರತ್ತುಗಳು

1) ಕಾಮಗಾರಿಗಳು ಪೂರ್ತಿಗೊಳಿಸುವ ಅವಧಿ - 3 ತಿಂಗಳು.

2) ಗುತ್ತಿಗೆದಾರರ ದರ್ಜೆ - 1 ಲಕ್ಷದ ಒಳಗಿನ ಕಾಮಗಾರಿಗೆ 4ನೇ ದರ್ಜೆ, ಒಂದು ಲಕ್ಷದಿಂದ ಹತ್ತು ಲಕ್ಷದವರೆಗೆ ಮೂರನೇ ದರ್ಜೆ ಮತ್ತು ಉಳಿದ ಕಾಮಗಾರಿಗಳಿಗೆ 2ನೇ ದರ್ಜೆ ಮೇಲ್ಪಟ್ಟು.

3) ಶೇಕಡಾ 5 ಅಥವಾ ಇದಕ್ಕಿಂತ ಕಡಿಮೆ ದರ ಸೂಚಿಸಿದಲ್ಲಿ ಟೆಂಡರು ಮೊತ್ತಕ್ಕನುಗುಣವಾಗಿ ಟೆಂಡರು ದರದ ವ್ಯತ್ಯಾಸವನ್ನು ನಿಬಡ್ಡಿಯಾಗಿ ಹೆಚ್ಚುವರಿ ಠೇವಣಿಯಾಗಿ ನಗರಸಭೆಗೆ ಪಾವತಿಸಿ ರಶೀದಿಯನ್ನು ಟೆಂಡರಿಗೆ ಲಗ್ತೀಕರಿಸತಕ್ಕದ್ದು, ಈ ಠೇವಣಿಯನ್ನು ಕಾಮಗಾರಿ ಪೂರ್ತಿಗೊಂಡು ಪರಿಶೀಲನೆ ಬಳಿಕ ಮರುಪಾವತಿಸಲಾಗುತ್ತದೆ.

4) ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾಮಗಾರಿ ಪೂರ್ತಿಗೊಂಡ ದಿನಾಂಕದಿಂದ ಎರಡು ವರ್ಷದ ನಿರ್ವಹಣೆಯನ್ನು ಮಾಡತಕ್ಕದ್ದು.

5) ಯಾವುದೇ ಟೆಂಡರನ್ನು ಯಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಕಾದಿರಿಸಲಾಗಿದೆ.

6) ಇ.ಎಂ.ಡಿ.ಯನ್ನು ಚಲನ್. ಡಿ.ಡಿ. ಮತ್ತು ಪ್ಲಡ್ಜ್ ರಾಷ್ಟ್ರೀಯ ಉಳಿತಾಯ ಪತ್ರ ರೂಪದಲ್ಲಿ ಇರಿಸತಕ್ಕದ್ದು, ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇರಿಸದ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.

7) ಗುತ್ತಿಗೆದಾರರು ಕೆಲಸವನ್ನು ನಿಗದಿತ ಸಮಯದಲ್ಲಿ ಮಾಡಿ ಮುಗಿಸತಕ್ಕದ್ದು, ತಪ್ಪಿದಲ್ಲಿ ದಂಡ ವಿಧಿಸಲಾಗುವುದು.

8) ಗುತ್ತಿಗೆದಾರರು ಷರತ್ತು ವಿಧಿಸಿ ಟೆಂಡರು ಸಲ್ಲಿಸಿದ್ದಲ್ಲಿ ಅಂತಹ ಟೆಂಡರನ್ನು ತಿರಸ್ಕರಿಸಲಾಗುವುದು.

9) ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಪಟ್ಟವರಿಂದ ಪಡೆದುಕೊಳ್ಳಬಹುದು.

10) ಒಂದೇ ಕೋನದಲ್ಲಿ ಕಾಮಗಾರಿ ಪ್ರಾರಂಭಕ್ಕಿಂತ ಮುಂಚೆ, ಪ್ರಗತಿಯ ಮತ್ತು ಪೂರ್ತಿಗೊಂಡ ಕಾಮಗಾರಿಯ ಛಾಯಪ್ರತಿಯನ್ನು ಪ್ರತಿಯೊಂದು ಕಾಮಗಾರಿಗೂ ತಯಾರಿಸಿ ನೀಡತಕ್ಕದ್ದು.

11) ಕಾಮಗಾರಿಗಳು ಪೂರ್ತಿಗೊಂಡ ನಂತರ 3ನೇ ಪಾರ್ಟಿಯಿಂದ ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಿದ ನಂತರ ಬಿಲ್ಲು ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.

12) ಟೆಂಡರಿನೊಂದಿಗೆ ಸಿಂಧುತ್ವ ಹೊಂದಿರುವ ವ್ಯಾಟ್ ಪ್ರಮಾಣ ಪತ್ರ ಮತ್ತು ಕಳೆದ5 ವರ್ಷಗಳ ಬ್ಯಾಲೆನ್ಸ್ ಶೀಟ್ ಖಡ್ಡಾಯವಾಗಿ ಲಗತ್ತಿಸತಕ್ಕದ್ದು.

13) ಕಾಮಗಾರಿಗಳಿಗೆ ನಮೂದಿಸಿದ ಮೊತ್ತದ ಶೇ. 50 ರಷ್ಟು ಮೌಲ್ಯದ ಅದೇ ರೀತಿಯ ಕಾಮಗಾರಿಗಳನ್ನು ಕಳೆದ 5 ವರ್ಷಗಳಲ್ಲಿ ನಿರ್ವಹಿಸಿರುವ ಬಗ್ಗೆ ಸಂಬಂಧಿಸಿದ ಇಲಾಖೆಯ ಪ್ರಮಾಣ ಪತ್ರವನ್ನು ಟೆಂಡರಿನೊಂದಿಗೆ ಖಡ್ಡಾಯವಾಗಿ ಲಗತ್ತಿಸತಕ್ಕದ್ದು.

14) ಕಾಮಗಾರಿಯ ಟೆಂಡರು ಸ್ವೀಕರಿಸಲ್ಪಟ್ಟಲ್ಲಿ ಸ್ವೀಕರಿಸಿದ ದಿನಾಂಕದಿಂದ 20 ದಿನಗಳ ಒಳಗಾಗಿ ಶೇ 5.00ರಷ್ಟು ಭದ್ರತಾ ಠೇವಣಿಯನ್ನು ಪಾವತಿಸಿ ಕರಾರು ಪತ್ರ ಒಪ್ಪಿಸಿ ಕಾರ್ಯಾದೇಶ ಪಡೆಯುವುದು ಇದಕ್ಕೆ ತಪ್ಪಿದ್ದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರನ್ನು ರದ್ದುಪಡಿಸಲಾಗುವುದು.

15) ಕಾಮಗಾರಿಯ ಬಿಲ್ಲಿನಿಂದ ಮಾರಾಟ ತೆರಿಗೆ, ಆದಾಯ ತೆರಿಗೆ, ರಾಜಧನ ಮತ್ತು ಕಾರ್ಮಿಕ ಕಲ್ಯಾಣ ನಿಧಿ ಕರ ಶೇ 1.00ರಷ್ಟು ಕಡಿತಗೊಳಿಸಲಾಗುವುದು.

ಸಹಿ/-
ಅಧ್ಯಕ್ಷರು
ಉಡುಪಿ ನಗರಸಭೆ

ಸಹಿ/-
ಪೌರಾಯುಕ್ತರು
ಉಡುಪಿ ನಗರಸಭೆ

-/ಸಹಿ/-

ಪೌರಾಯುಕ್ತರು
ಉಡುಪಿ ನಗರ ಸಭೆ